ಓ.ಎಸ್.ನಂ.250/2015

ಡಿ.ಡಬ್ಲ್ಯೂ- 4

**ದಿನಾಂಕ: 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ**

ನಾವು ಮೂಲತಃ ಎನ್ ಆರ್ ಪುರ ತಾಲ್ಲೂಕು ಹೆಬ್ಬೆ ಗ್ರಾಮದವರು. ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಭದ್ರಮ್ಮನವರ ಕುಟುಂಬಕ್ಕೆ ಸಂಬಂಧಪಟ್ಟ ವ್ಯಕ್ತಿ. ನಾನು ಭದ್ರಮ್ಮನವರ ಮಗಳಾದ ದೇವಮ್ಮನವರ ಮಗಳಾದ ರತ್ನಮ್ಮನವರ ಮಗ. ಭದ್ರಮ್ಮ ನನಗೆ ಮುತ್ತಜ್ಜಿ ಆಗಬೇಕು. ನಾನು ಭದ್ರಮ್ಮನವರ ಮಗಳಾದ ದೇವಮ್ಮನವರ ಮಗಳಾದ ರತ್ನಮ್ಮನವರ ಮಗ ಎಂದು ಹೇಳಲು ನ್ಯಾಯಲಯಕ್ಕೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಚುನಾವಣಾ ಚೀಟಿಯನ್ನು ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ಚುನಾವಣಾ ಚೀಟಿಯನ್ನು ಅಂತ್ವಾನಿ ಗ್ರಾಮಪಂಚಾಯಿತಿಯಿಂದ ತೆಗೆಸಿರುತ್ತೇನೆ. ನ್ಯಾಯಾಲಯದಿಂದ ಒ ಎಸ್ 32/2016 ರಲ್ಲಿ ನನಗೆ ಸಮನ್ಸ್ ಬಂದಿರುತ್ತದೆ. ನಾನು ಒ ಎಸ್ 32/2016 ರಲ್ಲಿ ವಕೀಲರನ್ನು ನೇಮಕ ಮಾಡಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರಿದು ನಮ್ಮ ಮಾವ ವಕೀಲರನ್ನು ನೇಮಕ ಮಾಡಿರುತ್ತಾರೆಂದು ನುಡಿದಿರುತ್ತಾರೆ.

ಒ ಎಸ್ 32/2016 ರಲ್ಲಿ ನಿಮ್ಮ ಮಾವನವರಾಗಲೀ, ನೀವಾಗಲೀ ನಿಮ್ಮ ತಕರಾರನ್ನು ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಭದ್ರಮ್ಮನವರ ಹೆಸರಿನಲ್ಲಿ ಯಾವ ಸ್ವತ್ತುಗಳು ಇತ್ತು ಎಂದು ತಿಳಿಸುವುದಕ್ಕೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇವೆ ಎಂದು ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ನಾನು ಕಂದಾಯ ಕಟ್ಟಿರುವ ರಸೀದಿಗಳು ಮತ್ತು ಒಟರ್ ಐಡಿಯನ್ನು ಹಾಜರುಪಡಿಸಿರುತ್ತೇನೆ. ನೀವುಭದ್ರಮ್ಮನವರ ಮನೆಯಲ್ಲಿ ವಾಸವಾಗಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.50 ರಲ್ಲಿ ಎಷ್ಟು ಎಕರೆ ಇದೆ

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.50 ಜಮೀನು ಯಾವ ದಾಖಲಾತಿ ಆಧಾರದ ಮೇಲೆ ಭದ್ರಮ್ಮನವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಅಷ್ಟು ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಅಜ್ಜಿ ಮನೆಯಲ್ಲಿ ಒಂದು ಹುಲ್ಲಿನ ಮನೆ, ಒಂದು ಹಂಚಿನ ಮನೆ, ಹುಲ್ಲಿನ ಬಚ್ಚಲು ಮನೆ, ಒಂದು ತೆಂಗಿನ ಮರ, ಎರಡು ಹಲಸಿನ ಮರ ನಾಲ್ಕು ಮಾವಿನ ಮರ ಇದೆ ಎಂಬುದಕ್ಕೆ ಯಾವ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾನು ಹುಟ್ಟಿ ಬೆಳೆದಾಗಿನಿಂದಲೂ ನೋಡಿರುತ್ತೇನೆ, ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅಭಯಾರಣ್ಯ ವನ್ಯ ಜೀವಿ ಸಂರಕ್ಷಣಾ ಯೋಜನೆಯವರು ಮೇಲೆ ತಿಳಿಸಿದ ಸ್ವತ್ತನ್ನು ಒತ್ತುವರಿ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಒತ್ತುವರಿ ಬಗ್ಗೆ ಭದ್ರಮ್ಮನವರಿಗೆ 65 ಸಾವಿರ ಹಣ ಪರಿಹಾರವಾಗಿ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಭದ್ರಮ್ಮನವರಿಗೆ ಇಬ್ಬರು ಗಂಡುಮಕ್ಕಳು ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆಂದರೆ ಸರಿ. ಹೆಣ್ಣು ಮಕ್ಕಳು ಮದುವೆಯಾದ ನಂತರ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ಭದ್ರಮ್ಮನ ಇಬ್ಬರು ಗಂಡು ಮಕ್ಕಳು ಹೆಬ್ಬೆ ಗ್ರಾಮದಲ್ಲಿ ವಾಸವಾಗಿದ್ದಾರೆಂದರೆ ಸರಿ. ಒ ಎಸ್ 32/2016 ರ ದಾವ ಸ್ವತ್ತುಗಳು ಭದ್ರಮ್ಮನವರಿಗೆ ಪರಿಹಾರದ ಮೂಲಕ ಬಂದಿರುತ್ತದೆ ಎಂದು ತಿಳಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು

ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ಅಜ್ಜಿ ಹೆಸರಿನಲ್ಲಿ ಮಹಜರ್ ಮಾಡಿದ್ದು, ಅದನ್ನು ನಮ್ಮ ಮಾವ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ.

ಭದ್ರಮ್ಮನವರ ಮಗಳಾದ ನಿಂಗಮ್ಮನವರನ್ನು ಯಾವ ಊರಿಗೆ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸಾಕ್ಷಿ ಶಿವಮೊಗ್ಗದ ಕಾಚಿನಕಟ್ಟೆಗೆ ಕೊಟ್ಟು ಮದುವೆ ಮಾಡಿರುತ್ತಾರೆಂದು ನುಡಿದಿರುತ್ತಾರೆ. ನಿಂಗಮ್ಮನವರು ಕಾಚಿನಕಟ್ಟೆಯಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಶಂಕರ್ ರವರು ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದು, ಹೆಬ್ಬೆ ಗ್ರಾಮದಲ್ಲಿ ವಾಸವಾಗಿದ್ದರು. ನಾಗರಾಜ್ ರವರು ಎಂ ಸಿ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಾಗರಾಜ್ ರವರಿಗೆ ಸರ್ಕಾರದಿಂದ ಓ ಎಸ್ 250/2015 ರ ದಾವ ಸ್ವತ್ತುಗಳು ಮಂಜೂರಿ ಆಗಿರುತ್ತದೆ ಎಂದರೆ ಸಾಕ್ಷಿ ಅದು ಭದ್ರಮ್ಮನವರ ಹೆಸರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಮಂಜೂರಾತಿಯ ಪ್ರಕಾರ ರೆವಿನ್ಯೂ ಇಲಾಖೆಯಿಂದ ಖಾತೆ ಆಗಿದೆ ಎಂದರೆ ಸಾಕ್ಷಿ ಅದು ಭದ್ರಮ್ಮನವರ ಹೆಸರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸ್ವತ್ತಿನಲ್ಲಿ ನಿಮಗೆ ಹಕ್ಕು ಇದೆ ಎಂದು ರೆವಿನ್ಯೂ ಇಲಾಖೆಯವರಿಗೆ ಜಂಟಿ ಖಾತೆ ಮಾಡಿಕೊಡಲು ಯಾವುದಾದರೂ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. 250/15 ದಾವ ಸ್ವತ್ತಿನಲ್ಲಿ ನಾಗರಾಜ್ ರವರು ಸ್ವಂತ ಮನೆ ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಾಗರಾಜ್ ರವರು ಸದರಿ ಸ್ವತ್ತಿನಲ್ಲಿ ಅಡಿಕೆ ತೋಟವನ್ನು ಸಹ ಮಾಡಿರುತ್ತಾರೆಂದರೆ ಸರಿ. ಓ ಎಸ್ 250/15 ರಲ್ಲಿರುವ ದಾವ ಸ್ವತ್ತುಗಳು ನಾಗರಾಜ್ ರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಸ್ವತ್ತುಗಳು ಭದ್ರಮ್ಮನವರ ಹೆಸರಿಗೆ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ

ಓ.ಎಸ್.ನಂ.250/2015

**ಡಿ.ಡಬ್ಲ್ಯೂ- 4**

ಸರಿಯಲ್ಲ. ಒ ಎಸ್ 250/15 ರಲ್ಲಿರುವ ದಾವ ಸ್ವತ್ತಿಗೂ ಭದ್ರಮ್ಮನವರ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚಾಯಿತಿದಾರರ ಮುಂದೆ ಶಂಕರ್ ರವರಿಗೆ 15 ಗುಂಟೆ ಬಿಟ್ಟುಕೊಟ್ಟಿರುವ ಬಗ್ಗೆ ದಾಖಲಾತಿಗಳುಇರುತ್ತದೆ. ನೀವು ಯಾವುದೇ 15 ಗುಂಟೆಯನ್ನು ಬಿಟ್ಟುಕೊಟ್ಟಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**